ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಉದ್ದೇಶಪೂರ್ವಕವಾಗಿ ತಡೆಹಿಡಿದಿಲ್ಲ. ದುಡ್ಡೂ ಸಹಿತ ಬಿಡುಗಡೆಯಾಗಿದೆ. ನಬಾರ್ಡ್‌ನಿಂದ ದುಡ್ಡೂ ಬರುತ್ತಿದೆ. ಖಂಡಿತವಾಗಿ ಪರಿಶೀಲಿಸುತ್ತೇವೆ.

ಶ್ರೀ ಸಿ. ಬೈರೇಗೌಡ : ಎಸ್ಟಿಮೇಟ್ ಸ್ಕ್ರಾಂಕ್ಷನ್ ಮಾಡುವಾಗ ಫೀಸಬಿಲಿಟಿ ನೋಡಿಕೊಳ್ಳಬೇಕಾಗಿತ್ತೋ, ಬೇಡವೋ?

ಅಧ್ಯಕ್ಷರು : ಡಿಮ್ಯಾಂಡ್ ಬಂದಾಗ ನೀವು ಮಾತನಾಡಿ.

ತುಮಕೂರಿನಲ್ಲಿ ಯುವಕ ವಿದ್ಯಾರ್ಥಿ ನಿಲಯ ಸ್ಥಾಪನೆ

2460 - ಶ್ರೀ ಷಫಿ ಅಹಮದ್(ತುಮಕೂರು) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರಿನಲ್ಲಿ ಕೇಂದ್ರ ಯೂತ್ ಹಾಸ್ಟೆಲ್‌ನ್ನು ಆರಂಭಿಸುವ ಪ್ರಸ್ತಾವನೆ ಇದೆಯೇ?

ಆ) ಯೂತ್ ಹಾಸ್ಟೆಲ್ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು?

ಇ) ಯೂತ್ ಹಾಸ್ಟೆಲ್‌ನಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಕಲ್ಪಿಸಲಾಗುವುದು?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಸಂಸ್ಕೃತಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಷಫಿ ಅಹಮದ್ : ಮಾನ್ಯ ಅಧ್ಯಕ್ಷರೇ, ಇಲ್ಲಿ 'does not arise' ಎಂದು ಹೇಳಿದ್ದಾರೆ. ಆದರೆ ಸನ್ಮಾನ್ಯ ಸಚಿವರು ಇದರ ಬಗ್ಗೆ ಪತ್ರ ಬರೆದಿದ್ದಾರೆ. ಎರಡು ಎಕರೆ ಜಮೀನನ್ನು ಹಾಸ್ಟೆಲ್‌ಗಾಗಿ ಕೊಡಬೇಕೆಂದು ಜಿಲ್ಲಾಪರಿಷತ್‌ಗೆ ಪತ್ರ ಬರೆದಿದ್ದಾರೆ. ಜಿಲ್ಲಾ ಪರಿಷತ್‌ನವರು ಎರಡು ಎಕರೆ ಜಾಗವನ್ನು ಯೂತ್ ಸರ್ವೀಸ್ ಡಿಪಾರ್ಟ್‌ಮೆಂಟ್‌ಗೆ ವಹಿಸಿಕೊಟ್ಟಿದ್ದಾರೆ. ಉತ್ತರ ನೋಡಿದರೆ 'ಡಸ್ ನಾಟ್ ಆರೈಸ್' ಎಂದು ಕೊಟ್ಟಿದ್ದಾರೆ. ಜಿಲ್ಲಾ ಪರಿಷತ್‌ನವರು ಯೂಥ್ ಸರ್ವೀಸ್ ಹಾಸ್ಟಲ್ ಕಟ್ಟುವುದಕ್ಕೆ ಎರಡು ಎಕರೆ ಜಾಗ ಕೊಟ್ಟಿದ್ದಾರೆ. ಕೇಂದ್ರ ಸರಕಾರದವರು ಹಣ ಕೊಟ್ಟಿದ್ದರೆ ಅತೀ ಶೀಘ್ರದಲ್ಲಿ ಈ ಹಾಸ್ಟೆಲ್ ಕೆಲಸವನ್ನು ಪ್ರಾರಂಭಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ.ಮುನಿಯಪ್ಪ (ರೇಷ್ಮೆ ಖಾತೆ ರಾಜ್ಯ ಸಚಿವರು) ಯುವಜನ ಸೇವಾ ರಾಜ್ಯ ಮಂತ್ರಿಗಳ ಪರವಾಗಿ : ಈ ವಿಚಾರದಲ್ಲಿ ಒಂದು ಪತ್ರ ವ್ಯವಹಾರ ಮಾತ್ರ ನಡೆದಿದೆ. ಲೋಕಸಭೆಯ ಉಪಾಧ್ಯಕ್ಷರು, ನಮ್ಮ ಯೂಥ್ ಸರ್ವೀಸ್ ನಿರ್ದೇಶಕರಿಗೆ ಒಂದು ಪತ್ರ ಬರೆದು ಜಿಲ್ಲಾ ಪರಿಷತ್ ಅಧ್ಯಕ್ಷರು ಇದಕ್ಕೆ ಬೇಕಾದಂಥ ಜಾಗ ಕೊಡುವುದಕ್ಕೆ ಸಹಕರಿಸುತ್ತಾರೆ. ಅವರ ಜೊತೆ ಪತ್ರ ವ್ಯವಹಾರ ನಡೆಸಿ ಎಂದು ಬರೆದು ಕಳುಹಿಸಿಕೊಟ್ಟಿದ್ದಾರೆ. ಅವರು ಸೆಪ್ಟೆಂಬರ್ 4 ರಂದು ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. ಅವರು ನಿವೇಶನ ಕೊಡುವುದರ ಬಗ್ಗೆ ಖಾತ್ರಿಯನ್ನು

ಕೊಟ್ಟರೆ, ಎಲ್ಲಾ ಸಂಬಂಧಪಟ್ಟೇ ದಾಖಲೆಗಳನ್ನು ಸೇರಿಸಿ, ಕೇಂದ್ರ ಸರಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಷಫಿ ಅಹಮದ್ : ಜಿಲ್ಲಾ ಪರಿಷತ್‌ನವರು ಜಾಗ ಕೊಟ್ಟಿದ್ದಾರೆ.

ಅಧ್ಯಕ್ಷರು : ಸರಿ ಕೊಟ್ಟಿದ್ದರೆ ಮಾಡುತ್ತಾರೆ ಬಿಡಿ. ಈಗ ಪ್ರಶ್ನೋತ್ತರ ಕಾಲ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಹೊಸದುರ್ಗದಲ್ಲಿ ಮಿನಿ ವಿಧಾನಸೌಧ.

2598 - ಶ್ರೀ ಇ. ವಿಜಯಕುಮಾರ್(ಹೊಸದುರ್ಗ) : ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗದ ತಹಸೀಲ್ದಾರವರ ಕಛೇರಿ ಶಿಥಿಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹೊಸದುರ್ಗದ ಮಿನಿ ವಿಧಾನಸೌಧ ಕಟ್ಟಡವು ಪೂರ್ಣಗೊಳ್ಳದೆಯಿರಲು ಕಾರಣವೇನು ಹಾಗೂ ಈ ಕಟ್ಟಡ ಪೂರ್ಣಗೊಳ್ಳಲು ಎಷ್ಟು ಕಾಲ ಬೇಕಾಗುತ್ತದೆ?

ಶ್ರೀ ಜಿ.ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):

ಅ) ಬಂದಿದೆ.

ಆ) ಸಾಕಷ್ಟು ಅನುದಾನದ ಕೊರತೆಯಿಂದಾಗಿ ಪೂರ್ಣಗೊಂಡಿಲ್ಲ. ಈ ಕಾಮಗಾರಿಯನ್ನು ಹಣದ ಲಭ್ಯತೆಯನ್ನು ಆಧರಿಸಿ ಡಿಸೆಂಬರ್ 91ರ ಅಂತ್ಯದ ವೇಳೆಗೆ ಮುಗಿಸಲು ಯೋಜಿಸಲಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಈವರೆಗೆ ಖರ್ಚಾಗಿರುವ ಹಣ

2674 - ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಗೆ ಈವರೆಗೆ ನಿರ್ಮಾಣ ಕಾರ್ಯಕ್ಕೆ ಖರ್ಚಾಗಿರುವ ಹಣವೆಷ್ಟು?

ಆ) ಈ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗುವ ಅವಧಿ ಎಷ್ಟು?

ಇ) ಈ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರಲು ವೆಚ್ಚವಾಗುವ ಹಣವೆಷ್ಟು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟಕ್ಕೆ ಇದುವರೆಗೆ ಖರ್ಚಾಗಿರುವ ಹಣ ರೂ. 660 ಕೋಟಿಗಳು.

ಆ) ಕಾರ್ಯಗತವಾಗುತ್ತಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟವನ್ನು 1966ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.